# ಅಗೋ ಬಂತು - ಸುಡು ಸುಡು ಬಿಸಿಲು!

ಬೇಸಿಗೆಯ ಸುಡು ಬಿಸಿಲಿನಲ್ಲಿ, ನಮ್ಮ ಸುತ್ತಮುತ್ತ ಹಲವಾರು ಗಿಡ-ಮರ, ಪ್ರಾಣಿ, ಜಂತುಗಳು ನೋಡಲು ಸಿಗುತ್ತವೆ. ಹಾವುರಾಣಿ ಮತ್ತು ಹೆಂಟೆಗೊದ್ದ ಬಿಸಿಲು ಕಾಯುವುದು ಅಥವಾ ಪ್ರಾಣಿ-ಪಕ್ಷಿಗಳು ತಮ್ಮನ್ನು ತಾವೇ ತಂಪಾಗಿ ಇಟ್ಟುಕೊಳ್ಳಲು ನೀರಿನಲ್ಲಿ ಆಡುವುದು ಕಾಣಬಹುದು. ಬೇಸಿಗೆಯಲ್ಲಿ ಸಿಗುವ ತಾಜಾ ಹಣ್ಣುಗಳು, ನಮಗೆ ಸೆಕೆಯಿಂದ ಪಾರಾಗಲು ಸಹಾಯ ಮಾಡುತ್ತವೆ. ಒಮ್ಮೆ ನಿಮ್ಮ ಕಿಟಕಿಯ ಹೊರಗೆ ನೋಡಿ, ನಿಮ್ಮ ಸುತ್ತಮುತ್ತ ಓಡಾಡಿ ಗಮನಿಸಿ ನೋಡಿ - ಈ ಕೆಳಗಿನ ಯಾವುದಾದರೂ ಮೂರನ್ನು ಅಡ್ಡದ ಅಥವಾ ಉದ್ದದ ಸಾಲಿನಲ್ಲಿ ಕಂಡುಹಿಡಿದು ಹೇಳಿ - 'ಅಗೋ ನೋಡು - ಬೇಸಿಗೆ ಕಾಲವಿದು!' ನೀವು ಬಳಸುವ ಕೆಳಗಿನ ಚೌಕಗಳ ಖಾಲಿ ಭಾಗದಲ್ಲಿ ನಿಮ್ಮ ವೀಕ್ಷಣೆಯ ದಿನಾಂಕ, ಸಮಯ, ಮತ್ತು ಸ್ಥಳವನ್ನು ಗುರುತು ಹಾಕಿ.


ಬಿಸಿಲು ಕಾಯಿಸುತ್ತಿರುವ ಪ್ರಾಣಿಗಳು


ಆಕಾಶದೆತ್ತರದಲ್ಲಿ ಸುತ್ತುವ ಪಕ್ಷಿಗಳು


ಹಣ್ಣು ಬಿಟ್ಟಿರುವ ಮರ

## ನಾನು ಕಂಡದ್ದು

ಈ ಋತುವಿನಲ್ಲಿ ನಾನು ಕಂಡ ಹೊಸ ವಿಷಯ:


ನಿಮ್ಮ ಮನೆ / ಶಾಲೆಯಲ್ಲಿ ಇರುವ ಜೇಡಗಳು


ಒಣ ಹುಲ್ಲು? ಇನ್ನೊಮ್ಮೆ ನೋಡಿ - ಅದು ಹುಲ್ಲೋ ಅಥವಾ ಮಿಡತೆಯೊ?


ತಮ್ಮನ್ನು ತಾವೇ ತಂಪಾಗಿ ಇಟ್ಟುಕೊಳ್ಳುವ ಪ್ರಾಣಿ/ಪಕ್ಷಿಗಳು

ಈ ಋತುವಿನಲ್ಲಿ ನನಗೆ ಕಂಡುಬರದೇ ಇರುವ ವಿಷಯ:


ಗಾಳಿಯಲ್ಲಿ ತೇಲುತ್ತಿರುವ/ ಹಾರಾಡುತ್ತಿರುವ ಬೀಜಗಳು


ಹೂವನ್ನು ಭೇಟಿಮಾಡಲು ಬಂದ ಕೀಟ


ಇರುವೆಗಳ ಸಾಲು

ಈ ಋತುವಿನಲ್ಲಿ ನಾನು ಹಾಕುವ ಬಟ್ಟೆ, ತಿನ್ನುವ ಊಟ ಹಾಗು ಇತರ ದಿನ ನಿತ್ಯದ ಅಭ್ಯಾಸದಲ್ಲಿ ಆಗಿರುವ ಬದಲಾವಣೆಗಳು:

## ಚಟುವಟಿಕೆ: ಸಂಚರಿಸುವ ಬೀಜಗಳು

ಹಾರಾಡುವ ಅಥವಾ ಗಾಳಿಯಲ್ಲಿ ತೇಲಿಹೋಗುತ್ತಿರುವ ಬೀಜಗಳನ್ನು ನೀವು ಗಮನಿಸಿದ್ದೀರಾ? ಅವು ಹೇಗೆ ಹಾರುತ್ತವೆ? ಬೀಜಗಳು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ, ಬೇರೆ ಯಾವುದಾದರೂ ರೀತಿಯಲ್ಲಿ ಹೋಗಲು ಸಾಧ್ಯವೇ? ಬೀಜಗಳು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಏಕೆ ಹೋಗಬೇಕು?

ನೀವೊಂದು ಬೀಜವಾದರೆ ಒಂದು ಜಾಗದಿಂದ ಮತ್ತೊಂದಕ್ಕೆ ಹೇಗೆ ಹೋಗಲು ಇಷ್ಟಪಡುತ್ತೀರ? ಹೀಗೆ ಒಂದು ಜಾಗದಿಂದ ಮತ್ತೊಂದಕ್ಕೆ ಹೋದ ರೀತಿಯನ್ನು ಚಿತ್ರಕಥೆಯ ರೂಪದಲ್ಲಿ ಬಿಡಿಸಿ-ಬರೆಯಿರಿ.

ಚಿತ್ರ ವಿನ್ಯಾಸ : ಕಾರುಣ್ಯ ಭಾಸ್ಕರ್

This work is licensed to Nature Classrooms under CC BY-SA 4.0

Nature Classrooms · The Fig Tree Learning Centre · BENGALURU SUSTAINABILITY FORUM · Maadhyama Aneka ಮಾಧ್ಯಮ ಅನೇಕ